ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ: 1234, 5ನೇ ಮಹಡಿ, ಕೆ.ಎಸ್.ಎಸ್.ಐ.ಡಿ.ಸಿ, ಐಟಿ ಪಾರ್ಕ್, ಸೌತ್ ಬ್ಲಾಕ್
ರಾಜಾಜಿನಗರ, ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-560010
ದೂ. 080-22372738 e-mail: karnregs@gmail.com

ಆರ್.ಡಿ.ಸಿ.-ಇ.ಜಿ.ಎಸ್/6-1 /2022(e-673700) ದಿನಾಂಕ: 03-09-2022

**ಇವರಿಗೆ,**
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

**ಮಾನ್ಯರೇ,**

**ವಿಷಯ:** 2022-23ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಳ್ಳುವ ವಿವಿಧ ವೈಯಕ್ತಿಕ ಕಾಮಗಾರಿಗಳ ಪರಿಷ್ಕೃತ ಮಾದರಿ ಅಂದಾಜು ಪಟ್ಟಿಗಳಿಗೆ ಅನುಮೋದನೆ ನೀಡಿರುವ ಕುರಿತು.

******

2022-23ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ವೈಯಕ್ತಿಕ ಕಾಮಗಾರಿ ಕೈಗೊಳ್ಳಲು ಈ ಕೆಳಕಂಡ ಮಾದರಿ ಅಂದಾಜು ಪಟ್ಟಿಗಳನ್ನು ಲೋಕೋಪಯೋಗಿ ಇಲಾಖೆಯ ಪರಿಷ್ಕೃತ ದರಗಳನ್ನು ಹಾಗೂ ಮನರೇಗಾ ದರಪಟ್ಟಿಯನ್ನು ಅಳವಡಿಸಿಕೊಂಡು ಘಟಕ ವೆಚ್ಚವನ್ನು ಹೆಚ್ಚಿಸಲಾಗಿದೆ. ಸದರಿ ದರಗಳನ್ವಯ ಸೆಕ್ಯೂರ್ ತಂತ್ರಾಂಶದಲ್ಲಿ ಅಂದಾಜು ಪಟ್ಟಿಗಳನ್ನು ತಯಾರಿಸಿ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

**2022-23ನೇ ಸಾಲಿನ ಮನರೇಗಾ ವೈಯಕ್ತಿಕ ಆಧಾರಿತ ಕಾಮಗಾರಿಗಳ ಮಾದರಿ ಅಂದಾಜು ಪಟ್ಟಿಗಳು.**

| ಕ್ರ. ಸಂ. | ಕಾಮಗಾರಿಗಳು | ಅಂದಾಜು ವೆಚ್ಚ (ಲಕ್ಷಗಳಲ್ಲಿ) 2021-22ನೇ ಸಾಲು | ಪರಿಷ್ಕೃತ ಅಂದಾಜು ವೆಚ್ಚ (ಲಕ್ಷಗಳಲ್ಲಿ) 2022-23ನೇ ಸಾಲು |
|---|---|---|---|
| 1 | ದನದ ಕೊಟ್ಟಿಗೆ - 4 ದನಗಳಿಗೆ | 0.43 | 0.57 |
| 2 | ಕುರಿ/ಮೇಕೆ ಕೊಟ್ಟಿಗೆ | 0.68 | 0.70 |
| 3 | ಬಚ್ಚಲು ಗುಂಡಿ | 0.14 | 0.11 |
| 4 | ಕೋಳಿ ಶೆಡ್ | 0.62 | 0.60 |
| 5 | ಕೋಳವೆ ಬಾವಿ ಮರುಪೂರಕ ಘಟಕ | 0.20 | 0.27 |
| 6 | ಎರೆಹುಳ ಘಟಕ | 0.27 | 0.20 |
| 7 | ತೆರೆದ ಬಾವಿ | 1.28 | 1.50 |
| 8 | ಅಜೋಲಾ ಘಟಕ | 0.17 | 0.16 |
| 9 | ಕೃಷಿ ಹೊಂಡ 9.0x9.0x3.0 ಮೀ | 0.77 | 0.52 |

| | | | |
|---|---|---|---|
| 10 | ಕೃಷಿ ಹೊಂಡ 10.0x10.0x3.0 ಮೀ | 0.90 | 0.63 |
| 11 | ಕೃಷಿ ಹೊಂಡ 12.0x12.0x3.0 ಮೀ | 1.22 | 0.92 |
| 12 | ಕೃಷಿ ಹೊಂಡ 15.0x15.0x3.0 ಮೀ | 1.85 | 1.49 |
| 13 | ಕಂದಕ ಬದು ನಿರ್ಮಾಣ - 0.45 ಚ.ಮೀ ಛೇದ | 0.37 | 0.35 |
| 14 | ಕಂದಕ ಬದು ನಿರ್ಮಾಣ - 0.54 ಚ.ಮೀ ಛೇದ | 0.44 | 0.42 |
| 15 | ಕಂದಕ ಬದು ನಿರ್ಮಾಣ - 0.72 ಚ.ಮೀ ಛೇದ | 0.71 | 0.56 |
| 16 | ಕಂದಕ ಬದು ನಿರ್ಮಾಣ - 1.07 ಚ.ಮೀ ಛೇದ | 1.09 | 0.84 |
| 17 | ಹಂದಿ ಕೊಟ್ಟಿಗೆ | 0.91 (0.19) | 0.87 (0.57) |

1. ಪರಿಷ್ಕೃತ ಘಟಕ ವೆಚ್ಚಗಳನ್ನು ಈ ವರ್ಷ ಪ್ರಾರಂಭಿಸಿರುವ ಕಾಮಗಾರಿಗಳಿಗೆ ಮಾತ್ರ ಅನ್ವಯಿಸತಕ್ಕದ್ದು.
2. 2022-23ನೇ ಸಾಲಿನ ಕ್ರಿಯಾಯೋಜನೆಯಡಿಯಲ್ಲಿ ವೈಯಕ್ತಿಕ ಕಾಮಗಾರಿಗಳಿಗೆ ಹಿಂದಿನ ಘಟಕ ವೆಚ್ಚವನ್ನು ನಮೂದಿಸಿದ್ದು, ಕ್ರಿಯಾ ಯೋಜನೆ ಅನುಮೋದಿಸಲಾಗಿದ್ದರೂ ಕೂಡ, ಸದರಿ ಕಾಮಗಾರಿಗಳಿಗೆ ಮೇಲ್ಕಂಡ ಪರಿಷ್ಕೃತ ಘಟಕ ವೆಚ್ಚಗಳನ್ನು ಅಳವಡಿಸಿಕೊಳ್ಳಲು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಒಂದು ಆದೇಶದ ಮೂಲಕ ಅನುಮೋದನೆ ನೀಡತಕ್ಕದ್ದು.
3. ಮೇಲ್ಕಂಡಂತೆ ತಯಾರಿಸಲಾದ ಮಾದರಿ ಅಂದಾಜು ಪಟ್ಟಿಗಳನ್ನು ಇ-ಮೇಲ್ ಮುಖಾಂತರ ತಮ್ಮ ಕಛೇರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಅಂದಾಜು ಪಟ್ಟಿಗಳು ಮಾದರಿ ಅಂದಾಜು ಪಟ್ಟಿಗಳಾಗಿದ್ದು, ಸ್ಥಳಕ್ಕೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಂಡು ಸಕ್ಷಮ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದು ಅನುಷ್ಠಾನಗೊಳಿಸಲು ತಿಳಿಯಪಡಿಸಿದೆ.
5. ಅಂದಾಜು ಪಟ್ಟಿಗಳನ್ನು ಈ ವರೆಗಿನ ಮಾರುಕಟ್ಟೆ ದರಗಳನ್ನು ಪರಿಗಣಿಸಿ ಲೋಕೋಪಯೋಗಿ ಇಲಾಖೆಯ ಏಕರೂಪ ದರಪಟ್ಟಿ ಮತ್ತು ಪರಿಷ್ಕೃತ ದರಗಳನ್ವಯ ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದೆ.
6. ಈ ಹಿಂದೆ ದನದ ಕೊಟ್ಟಿಗೆ ನಿರ್ಮಾಣಕ್ಕೆ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಮತ್ತು ಇತರೆ ವರ್ಗಗಳಿಗೆ ಬೇರೆ ಬೇರೆ ಮೊತ್ತವನ್ನು ನೀಡಲಾಗುತ್ತಿತ್ತು. ಪ್ರಸ್ತುತ ಎಲ್ಲಾ ಅರ್ಹ ಫಲಾನುಭವಿಗಳಿಗೆ ದನದ ಶೆಡ್ ನಿರ್ಮಿಸಲು ಪರಿಷ್ಕೃತ ಅಂದಾಜು ವೆಚ್ಚ ರೂ.57,000/- ಗಳ ಸಮಾನ ಅನುದಾನವನ್ನು ನೀಡಲು ತಿಳಿಸಿದೆ.

ಷರ:

- ವೈಯಕ್ತಿಕ ಕಾಮಗಾರಿಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಘಟಕ ವೆಚ್ಚವು ಅಧಿಕವಾದಲ್ಲಿ ಹೆಚ್ಚುವರಿ ವೆಚ್ಚವನ್ನು ಫಲಾನುಭವಿಯೇ ವೈಯಕ್ತಿಕವಾಗಿ ಭರಿಸತಕ್ಕದ್ದು.
- ಹಂದಿ ಕೊಟ್ಟಿಗೆಯ ಮಾದರಿ ಅಂದಾಜು ಪಟ್ಟಿಯ ಸುತ್ತೋಲೆ ಪತ್ರವನ್ನು ಪ್ರತ್ಯೇಕವಾಗಿ ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿ

03/09/22

**ಆಯುಕ್ತರು ಗ್ರಾಮೀಣಾಭಿವೃದ್ಧಿ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**<u>ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ.</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.
3. ಆಯುಕ್ತರು, ಪಂಚಾಯತ್ ರಾಜ್, ಪಂಚಾಯತ್ ರಾಜ್ ಆಯುಕ್ತಾಲಯ ಬೆಂಗಳೂರು.
4. ಮುಖ್ಯ ಅಭಿಯಂತರರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
5. ನಿರ್ದೇಶಕರು, ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ, ಶೇಷಾದ್ರಿಪುರಂ, ಬೆಂಗಳೂರು.
6. ಆಯುಕ್ತರು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರ ಆಪ್ತ ಶಾಖೆಗೆ.
7. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
8. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ಲಲಿತ ಮಹಲ್ ರಸ್ತೆ, ಮೈಸೂರು.
9. ಮುಖ್ಯ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
10. ಜಂಟಿ ನಿರ್ದೇಶಕರು (ಆಡಳಿತ/ತೋಟಗಾರಿಕೆ/ತಾಂತ್ರಿಕ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
11. ಸಹಾಯಕ ನಿರ್ದೇಶಕರು (1, 2, 3 ಮತ್ತು ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
12. ರಾಜ್ಯ ಯೋಜನಾ ಅಭಿಯಂತರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
13. ಹೆಚ್ಚಿನ ಪ್ರತಿಗಳು.